

ಅರ್ಜುನ– ಸುಭದ್ರಾ

ಇರುತ್ತಿದ್ದರು.

ಒಂದು ದಿನ ರವಿ ಹೇಳಿದ 'ಇತ್ತೀಚೆಗೆ ನನ್ನ ಕೈ ನಡುಗುತ್ತದೆ ಫ್ರೆನಾ, ಎರಡು ಬಾರಿ ಕುಂಚ ಕೆಳಗೆ ಬಿತ್ತು. ನಾನು ಕಿಳಿಮಾನೂರಿಗೆ ಹೋಗಿ ಸ್ವಲ್ಪ ದಿನ ನಾಟಿ ವೈದ್ಯ ಮಾಡಿಸಿಕೊಳ್ಳೋಣ ಎಂದಿದ್ದೇನೆ.'

'ನಾನದನ್ನು ಒಂದು ತಿಂಗಳ ಹಿಂದೆಯೇ ಗಮನಿಸಿದೆ ರವಿ. ಡಾ.ಬಾಳಿಗ ಎಂಬ ಲಂಡನ್ ರಿಟರ್ನ್ಡ್ ಡಾಕ್ಟರೊಂದಿಗೆ ನಿನ್ನ ಕುರಿತು ಮಾತನಾಡಿದ್ದೇನೆ; ಅಲ್ಲಿಗೆ ಹೋಗೋಣ.'

'ಬೇಡ ಫ್ರೆನಾ. ತಿರುವನಂತಪುರದ ಹಳೆಯ ವೈದ್ಯರಲ್ಲಿ ನನಗೆ ನಂಬಿಕೆಯಿದೆ. ಹಲವೊಮ್ಮೆ ನಂಬಿಕೆ, ಔಷಧಿಗಳಿಗಿಂತ ಜಾಸ್ತಿ ಕೆಲಸ ಮಾಡುತ್ತದೆ.'

'ಹಾಗಾದರೆ ನೀನು ಬೊಂಬಾಯಿಯನ್ನು ಪೂರ್ಣವಾಗಿ ಮರೆತು ಹೊರಟು ಹೋಗಿ ಬಿಡುತ್ತೀಯಾ?'

'ಇಲ್ಲ, ಇಲ್ಲ. ಈ ಬಂಗ್ಲೆ ಹೀಗೇ ಇರುತ್ತದೆ. ನೀವೆಲ್ಲಾ ಚಿತ್ರಕಲೆಯನ್ನು ಮುಂದುವರೆಸಿಕೊಂಡು ಹೋಗಿ. ನಾನು ಸ್ವಲ್ಪ ಗುಣ ಹೊಂದಿದ ಮೇಲೆ ಬರುತ್ತೇನೆ.'

'ನಮಗೆ ಮಾರ್ಗದರ್ಶನ ಮಾಡಲು ಗುರುಗಳೇ ಇಲ್ಲದ ಮೇಲೆ...' ನಡುವೆ ಅಳುವ ದನಿಯಲ್ಲಿ ಹೇಳಿದ ದುರಂಧರ. ರವಿವರ್ಮ ಅವನ ಹೆಗಲ ಸುತ್ತ ಕೈಹಾಕಿ ಹೇಳಿದ 'ನೀನು ಹುಟ್ಟು ಕಲಾವಿದ. ನಿನಗೇಕೆ ಗುರು? ಈಗ ನನ್ನನ್ನೇ ನೋಡು. ನಾನು ಯಾವ ಗುರುಗಳಿಂದಲೂ ಕಲಿಯಲಿಲ್ಲ. ನಾನಾಗಿ ನನ್ನ ಹಾದಿ ಕಂಡುಹಿಡಿದುಕೊಂಡೆ.'

'ಅಂದರೆ ಗುರುವಿಗೆ ಸ್ಥಾನವೇ ಇಲ್ಲವೆ?' ನಾನು ಕೇಳಿದೆ.

'ಖಂಡಿತಾ ಇದೆ. ಯಾರದ್ದಾದರೂ ವಿಳಾಸ ಹುಡುಕ್ಕುತ್ತಿರುವಾಗ, ರಸ್ತೆಯಲ್ಲಿರುವ ಆಗಂತುಕ ನಿಮಗೆ ದಾರಿ ತೋರಿಸುತ್ತಾನೆ. ನೀವು ಅವನು ತೋರಿದ ದಾರಿಯಲ್ಲಿ ಆತ್ಮಸ್ಥೈರ್ಯದೊಂದಿಗೆ ನಿಮ್ಮ ಗುರಿಯ ಕಡೆ ಹೋಗುತ್ತೀರಿ ತಾನೆ? ಗುರುವಿನ ಕೆಲಸವೂ ಇಷ್ಟೆ. ಅವನು ಮಾರ್ಗದರ್ಶನ ಮಾಡುತ್ತಾನೆ; ಧೈರ್ಯ ತುಂಬುತ್ತಾನೆ, ಗುರಿ ಮುಟ್ಟಬೇಕಾಗಿರುವುದು ನೀವೇ' ಎಂದ ರವಿವರ್ಮ.

ಅಷ್ಟರಲ್ಲಿ ವಕೀಲ ಬಾಪಟ್ ಬಂದರು. ಅವರೂ ರವಿವರ್ಮ ಬೊಂಬಾಯಿ ಬಿಡುವ ಸುದ್ದಿ ತಿಳಿದು ದುಃಖಿತರಾಗಿದ್ದರು. ರವಿವರ್ಮ ಇನ್ನೂ 'ಪ್ಯಾಕ್' ಮಾಡದೇ ಇದ್ದ ಮೇನಕೆಯ ಚಿತ್ರವನ್ನು ಸುತ್ತಿ ಅವರ ಕೈಗಿಟ್ಟು 'ಇದು ನೀವು ನನಗೆ ವಕೀಲಿ ಪಾಠ ಮಾಡಿದ್ದಕ್ಕೆ ಗುರುಕಾಣಿಕೆ. ಆದರೆ ಮುದ್ರಣಾಲಯದ ಸ್ನೈಚರ್ ಇದನ್ನು ಕೇಳಿದಾಗ ಮುದ್ರಣಕ್ಕೆ ಕೊಟ್ಟ ನೆರವಾಗಿರಿ.' ಬಾಪಟ್ ಕೃತಜ್ಞತೆಯಿಂದ ಸ್ವೀಕರಿಸಿ ಹಿಂತಿರುಗಿದರು.

ಎಂಟು ತಿಂಗಳು ರವಿವರ್ಮ ಕಿಳಿಮಾನೂರಿನಲ್ಲಿ ತಂಗಿದ. ಅವನಿಲ್ಲದ ಆ ಭಾಟಿಯಾ ಬಂಗ್ಲೆ ನಮಗೆಲ್ಲಾ ದಿನಕರನಿಲ್ಲದ ಆಗಸದಂತಿತ್ತು. ಆದರೂ ಪ್ರತಿದಿನ ಬಂದು ನಮ್ಮ ನಮ್ಮ ಚಿತ್ರಗಳನ್ನು ಪೂರೈಸುತ್ತಾ ಸ್ಟುಡಿಯೊ ಶುಚಿಯಾಗಿರುವಂತೆ ನೋಡಿಕೊಳ್ಳುತ್ತಿದ್ದೆವು ನಾನು, ಜೋಷಿ, ಧುರಂಧರ.

ಎಂಟು ತಿಂಗಳ ನಂತರ ಹಿಂತಿರುಗಿ ಬಂದ ರವಿವರ್ಮ ತನ್ನ ಆಗಮನವನ್ನು ತಿಳಿಸಿ ಒಂದು ಚೀಟಿ ಕಳುಹಿಸಿದ ನನ್ನ ಬಂಗಲೆಗೆ. ಅವನನ್ನು ಕಾಣಲು ಧಾವಿಸಿ ಬಂದೆ. ನನ್ನನ್ನು ಆತ್ಮೀಯತೆಯಿಂದ ಆಲಂಗಿಸಿಕೊಂಡು 'ನೋಡಿದೆಯಾ ಫ್ರೆನಾ! ನನ್ನ ಆರೋಗ್ಯ ಈಗೆಷ್ಟು ಸುಧಾರಿಸಿದೆ. ತಿರುವನಂತಪುರದ ಡಾ. ವಾಸುದೇವನ್ ಉನ್ನಿ ನನ್ನ ಚಿಕಿತ್ಸೆ ಪ್ರಾರಂಭಿಸಿ ಒಂದು ತಿಂಗಳ ಕಾಲದಲ್ಲೇ ನನಗೆಷ್ಟೋ ಗುಣ ಕಂಡಿತು. ಈ ದಿನ ನೀನು ನಮ್ಮೊಂದಿಗೆ ಊಟ ಮಾಡು. ನಿನಗೆ ಕಿಳಿಮಾನೂರಿನ ವಿಷಯಗಳನ್ನು ಸವಿಸ್ತಾರವಾಗಿ ಹೇಳುವುದಿದೆ' ಎಂದ.

'ನಾನು ಅಲ್ಲಿ ಇರುವಷ್ಟು ದಿನವೂ ತುಂಬಾ ಸಂತೋಷವಾಗಿದ್ದೆ ಫ್ರೆನಾ. ನನ್ನನ್ನು ನೋಡಿಕೊಳ್ಳಲೆಂದೇ ನನ್ನ ತಂಗಿ ಮಂಗಳ ಮತ್ತು ಅವಳ ಮಕ್ಕಳೂ ಬಂದಿದ್ದರು. ಪ್ರತಿದಿನ ಬೆಳಿಗ್ಗೆ ಐದು ಗಂಟೆಗೆ ಎದ್ದು, ಪ್ರಾತಃವಿಧಿಗಳನ್ನು ಮುಗಿಸಿ, ಆನೆ, ಕುದುರೆ ಲಾಯಗಳಿಗೆ ಭೇಟಿ ನೀಡುತ್ತಿದ್ದೆ. ನಂತರ ತೆಂಗು, ಬಾಳೆ, ಮಾವಿನ ತೋಪುಗಳಲ್ಲಿ ಒಬ್ಬನೇ ಸುತ್ತಾಡಿ, ಭತ್ತರ ಗದ್ದೆಗಳಲ್ಲಿ ನಡೆದು ಕಣ್ತುಂಬಾ ಹಸಿರು ತುಂಬಿಕೊಂಡು ಹಿಂತಿರುಗುತ್ತಿದ್ದೆ. ಆನೆಗಳಿಗೆ ದೊಡ್ಡ ಹುಲ್ಲಿನ ಹೊರೆ ಹಾಕಿ, ಅವುಗಳ ಹೆಸರನ್ನು ಕರೆಯುತ್ತಾ ಬೆನ್ನುದಡುವುವುದರ ಸುಖ ನಿನಗೆ ಗೊತ್ತಿಲ್ಲ ಫ್ರೆನಾ!

ಅಷ್ಟರಲ್ಲಿ ತಂಗಿ ಬಂದು ನನ್ನನ್ನು ಉಪಾಹಾರಕ್ಕೆ ಕರೆಯುತ್ತಿದ್ದಳು. ಎಲ್ಲರೂ ನೆಲದ ಮೇಲೆ ಕುಳಿತು ಹೊಸದಾಗಿ ಕಿತ್ತ ಬಾಳೆಲೆಗಳ ಮೇಲೆ ಬಿಸಿಬಿಸಿಯ ಬೆಳ್ಳಗಿನ ಇಡ್ಲಿಗಳನ್ನು ಬಡಿಸಿಕೊಂಡು ತಿನ್ನುವೆವು. ರಾಜವರ್ಮ, ಗೋದವರ್ಮರ ಪತ್ನಿಯರು ಬೆಣ್ಣೆಸಾಂಬಾರ್‌ಗಳನ್ನು ತಂದು ಉಪಚರಿಸಿ ಬಡಿಸುತ್ತಿದ್ದರು.

ನನ್ನ ತೊಡೆಯ ಮೇಲೆ ಒಂದಲ್ಲ ಒಂದು ಮೊಮ್ಮಗು ಕುಳಿತಿರುತ್ತಿತ್ತು. ನಾನು ತಿನ್ನುವಾಗ ನಡುನಡುವೆ ಅವರಿಗೂ ತಿನ್ನಿಸುತ್ತಿದ್ದೆ. ತಿಂಡಿ ತಿಂದಾದ ಮೇಲೆ ನಾನು, ರಾಜವರ್ಮ,